ಆ ಪ್ರಬಲ ನೆರೆಯೆದುರು ಈಜಿ. ಬರುವವರಿಗೆ ಅಡ್ಡವಾಗಿ ಚಾಚಿದ ತೋಳಿನಂತೆ ನನ್ನ ಕರೆ.
ಮತ್ತು ನನ್ನ ಕೈ ತೆರೆದಿದೆ, ಇಷ್ಟಗಲ, ಅದು ಚಾಚಿದೆ ಮೇಲೆ. ಹಿಡಿಯಲೆತ್ನಿಸಿದೆ
ಏನನ್ನೋ ಆತ್ಮರಕ್ಷಣೆಗೊ ಅಥವಾ ಅದು ಎಚ್ಚರಿಕೆಯ ದನಿಯೊ?
ಅಲ್ಲಿ ಮೇಲಿರುವ, ಉಪಮಿಸಬಾರದ ಘನವೇ.

ರಿಲ್ಕನ ಅತ್ಯಂತ ಸುಂದರವಾದೊಂದು ರಚನೆ, ಹಕ್ಕಿ ಸುಳಿದಾಡುವ ಬಯಲ ಗಾಳಿ ಖಾಸಗಿಯೇನಲ್ಲ ಎನ್ನುವ ಅರ್ಥದ್ದು. (**What birds plunge through is not the intimate space**) ಇದನ್ನು ಎಚ್ಚೆಸ್ವಾರ್ ಹಕ್ಕಿ ಸುಳಿಯುವ ಗಾಳಿ ಎಂದು ಅನುವಾದಿಸಿದ್ದಾರೆ.

ಹಕ್ಕಿ ಸುಳಿಯುವ ಗಾಳಿ...
ಕಣ್ಣು ಕಾಣುತ್ತಿರುವ ಹಲವು ವಸ್ತುಗಳನ್ನು
ತೀವ್ರತಮರೂಪದಲಿ ತೆರೆದು ತೋರಿಸುವಂಥ
ಅಂತರಂಗದ ಬಯಲು,
ಹಕ್ಕಿ ಸುಳಿಯುವ ಗಾಳಿಯಲ್ಲ.
(ಜಗದ ಜಂಜಡದಲ್ಲಿ ಕಳೆದುಹೋಗುವೆ ನೀನು
ಆ ನೋಟ ಕಲುಷಿತವು ಅದು ನಿನ್ನದಲ್ಲ)

ಬಯಲು ಮೂಡುವ ತಾಣ ನಮ್ಮ ಒಳಗಡೆಯೆ ಇದೆ
ಅದು ಕಟ್ಟಿಕೊಡುವುದೇ ದಿಟದ ಲೋಕ:
ಇಲ್ಲಿರುವ ಈ ಮರವ ಅದರ ಇಡಿತನದಲ್ಲಿ
ತಿಳಿಯಬಯಸುವೆಯೇನು ನೀನು?
ನಿನ್ನ ಒಳಗಿನ ಒಳಗೆ ತುಂಬಿರುವ ಸಿರಿಬಯಲ
ಅದರ ಸುತ್ತಲು ಹರಡು ಕೋಟೆಯಂತೆ.
ಅದನು ಆವರಿಸಿರಲಿ ಸಂಯಮದ ಗಡಿಸೀಮೆ
ಅದು ಅಮಿತ ಅಲ್ಲ ಅದು ಪರಿಮಿತದ ಬೊಂತೆ.
ಅಂಟಿರದ ನಂಟಿನಲಿ ಮನೆಯ ಮಾಡುವ ತನಕ
ಅದಕೆ ಇಲ್ಲವೆ ಇಲ್ಲ, ಯಾವುದೇ ಇರವು.

ಇಲ್ಲಿ ತಪ್ಪದೇ ನಮಗೆ ನೆನಪಾಗುವುದು ಗೋಪಾಲಕೃಷ್ಣ ಅಡಿಗರ 'ಭೂಮಿಗೀತ' ಕವಿತೆಯ ಸಾಲು, "ಬತ್ತಲಾಗದೆ ಬಯಲು ಸಿಕ್ಕದಿಲ್ಲಿ". ರಿಲ್ಕನ ಇಡೀ ಕವಿತೆಯನ್ನು ಅಡಿಗರು ಎಷ್ಟು ಅಡಕವಾಗಿ ಒಂದು ಸಾಲಿನಲ್ಲಿ ಇಟ್ಟುಬಿಡುತ್ತಾರಲ್ಲವೆ! ನಮ್ಮ ಕನಕದಾಸರ ಸಾಲು "ಆಲಯವು ಬಯಲೊಳಗೊ| ಬಯಲು ಆಲಯದೊಳಗೊ" ಕೂಡ ಇಲ್ಲಿದೆ. ಎಚ್ಚೆಸ್ವಾರ್ ಸಾಲುಗಳನ್ನು, "ಅದು ಅಮಿತ, ಅಲ್ಲ ಅದು ಪರಿಮಿತದ ಬೊಂತೆ" ಎಂದು ಓದಿಕೊಂಡರೆ ಸಿಗುವ ಅರ್ಥ ಒಂದಾದರೆ, "ಅದು ಅಮಿತ ಅಲ್ಲ, ಅದು ಪರಿಮಿತದ ಬೊಂತೆ" ಎಂದು ಓದಿಕೊಂಡಾಗ ಸಿಗುವ ಅರ್ಥವೇ ಬೇರೆ. ರಿಲ್ಕನೂ ಅಮಿತ ಪರಿಮಿತಗಳನ್ನು ಒಮ್ಮೆಗೇ ಗ್ರಹಿಕೆಯ ಆಪೋಶನಕ್ಕೆ ಧಾರೆಯೆರೆಯುವ ಕವಿ. ಇದು ರೋಡಿನ್ ಕೊಟ್ಟ ದೀಕ್ಷೆ ರಿಲ್ಕನಿಗೆ. ಹಾಗೆಯೇ ರಿಲ್ಕನ ಕವಿತೆಗಳುದ್ದಕ್ಕೂ ನಮಗೆ ಮತ್ತೆ ಮತ್ತೆ ನೆನಪಾಗುವುದು ಈ.ಎಂ.